# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 94 | Pages. 2 | Date: 13-03-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 94 - ಪುಟಗಳು : 2 | 13-03-2026 | ಶುಕ್ರವಾರ | Ph: 8762954248 | ದರ : ₹1


# ವಿವಿಧ ಬೇಡಿಕೆ ಈಡೇರಿಕೆಗಾಗಿ ಸರಣಿ ಪ್ರತಿಭಟನೆ

## ಲೋಡ್ ಶೆಡ್ಡಿಂಗ್‌ಗೆ ಜಾವಗಲ್‌ನಲ್ಲಿ ರೈತರ ಆಕ್ರೋಶ I ಮದ್ಯ ಮಾರಾಟ ನಿಷೇಧಕ್ಕೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಗುರುವಾರ ಸರಣಿ ಪ್ರತಿಭಟನೆಗಳು ನಡೆದವು. ಬೇಸಿಗೆ ಆರಂಭದಲ್ಲೇ ವಿದ್ಯುತ್ ಲೋಡ್ ಶೆಡ್ಡಿಂಗ್ ವಿರೋಧಿಸಿ ಜಾವಗಲ್‌ನಲ್ಲಿ ರೈತರು ಸೆಸ್ಕ್ ಶಾಖಾಧಿಕಾರಿ ಕಚೇರಿಗೆ ಬೀಗ ಹಾಕಿದರೆ, ಒಳಮೀಸಲಾತಿ ವರದಿ ಪಾರದರ್ಶಕತೆಗೆ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಛಲವಾದಿ ಸಭಾ ಮತ್ತು ಹೂವಿನ ಮಾರನಹಳ್ಳಿಯಲ್ಲಿ ಮದ್ಯ ಮಾರಾಟ ನಿಷೇಧಕ್ಕೆ ಮಹಿಳೆಯರು ಒತ್ತಾಯಿಸಿದರು.

ಸೆಸ್ಕ್ ಕಚೇರಿ ಎದುರು ರೈತರ ಆಕ್ರೋಶ:

ಬೇಸಿಗೆ ಆರಂಭಕ್ಕೂ ಮೊದಲೇ ಲೋಡ್ ಶೆಡ್ಡಿಂಗ್ ಸಮಸ್ಯೆ ಆರಂಭವಾಗಿದ್ದು, ಬೆಳೆಗಳು ಒಣಗಿ ಹೋಗುತ್ತಿವೆ ಎಂದು ಆರೋಪಿಸಿ ಜಾವಗಲ್‌ನ ಸೆಸ್ಕ್ ಶಾಖಾಧಿಕಾರಿ ಕಚೇರಿಗೆ ಬೀಗ ಹಾಕಲಾಯಿತು. ದಿನಕ್ಕೆ 7 ಗಂಟೆ ವಿದ್ಯುತ್ ನೀಡಬೇಕೆಂದು ಸರ್ಕಾರದ ಆದೇಶವಿದ್ದರೂ ಕೇವಲ ಒಂದರಿಂದ ಎರಡು ಗಂಟೆ ಮಾತ್ರ ನೀಡಲಾಗುತ್ತಿದೆ. ಕರೆ ಮಾಡಿದರೆ ಅಧಿಕಾರಿಗಳು ಸ್ಪಂದಿಸುವುದಿಲ್ಲ. ನೀರಿಲ್ಲದೆ ಬೆಳೆಗಳು ಸಂಪೂರ್ಣ ಒಣಗುತ್ತಿವೆಯೆಂದು ಆಕ್ರೋಶ ವ್ಯಕ್ತಪಡಿಸಿದರು.

ಶುಂಠಿ, ತೆಂಗಿನ ತೋಟ, ತರಕಾರಿ, ದಾಳಿಂಬೆ ಸೇರಿ ಮತ್ತಿತರ ಬೆಳೆಗಳು ಹಾಳಾಗುತ್ತಿವೆ. ದಶಕಗಳ ಹಿಂದೆ ನೀರಿಲ್ಲದೆ ನಿರೀಕ್ಷಿತ ಬೆಳೆ ಪಡೆಯಲು ಆಗುತ್ತಿರಲಿಲ್ಲ. ಆದರೆ ಈಗ ನೀರಿದ್ದರೂ ವಿದ್ಯುತ್ ಇಲ್ಲವಾಗಿದೆ. ಸಾಲ ಸೋಲ ಮಾಡಿ ಬೆಳೆ ಮಾಡಿರುವ ರೈತರು ಸೆಸ್ಕ್ ಕಣ್ಣಾಮುಚ್ಚಾಲೆಯಿಂದ ಆತಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

ಜಾವಗಲ್ ಹೋಬಳಿಯ ಮಾರಗೊಂಡನಹಳ್ಳಿ, ತಾವರೆಹಳ್ಳಿ, ಚಿಕ್ಕಜಿಕಟ್ಟೆಹಳ್ಳಿ, ಜಾವಗಲ್, ಅರಕೆರೆ ಸೇರಿ ಸುತ್ತಲಿನ ಹಳ್ಳಿಗಳಲ್ಲಿ ಸಮಸ್ಯೆ ಯಾಗುತ್ತಿದೆ. ಕಳೆದ ಒಂದು ತಿಂಗಳ ಇದೇ ಪರಿಸ್ಥಿತಿ ಇದೆ. ಹೀಗಾದರೆ ಅನ್ನದಾತರು ಬದುಕುವುದು ಹೇಗೆಂದು ಪ್ರಶ್ನಿಸಿದರು.

ಪ್ರತಿಭಟನೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸೆಸ್ಕಾಂ ಎಇ ಜಯಪ್ಪ ಮಾತನಾಡಿ, ವಿದ್ಯುತ್ ಓವರ್‌ಲೋಡ್‌ನಿಂದ ಸಮಸ್ಯೆಯಾಗುತ್ತಿದೆ. ಕೋಳಗುಂದ ಗೇಟ್‌ನಲ್ಲಿ ಮತ್ತೊಂದು ಸಬ್ ಸ್ಟೇಷನ್ ಆಗಬೇಕು. ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಅದು ಸೇವೆಗೆ ಸಿದ್ಧವಾದರೆ ಸಮಸ್ಯೆ ಯಾಗುವುದಿಲ್ಲ. ಈ ವರ್ಷ ಬೇಸಿಗೆಯಲ್ಲಿ ವಿದ್ಯುತ್ ಅಭಾವ ಎದುರಾಗುವುದು ಸಹಜ. ತಾತ್ಕಾಲಿಕ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು. ನಿತ್ಯ 4 ಗಂಟೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಮುಂಜಾಗ್ರತೆ ವಹಿಸುತ್ತೇನೆಂದು ಭರವಸೆ ನೀಡಿದ ಬಳಿಕ ಪ್ರತಿಭಟನೆ ವಾಪಾಸ್ ಪಡೆಯಲಾಯಿತು.



ಒಳಮೀಸಲಾತಿ ಪರಿಶೀಲನೆಗೆ ಆಗ್ರಹ




ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ಸಿದ್ಧಪಡಿಸಿರುವ ಒಳಮೀಸಲಾತಿ ವರದಿ ಅವೈಜ್ಞಾನಿಕವಾಗಿದ್ದು, ಲೋಪದೋಷಗಳ ಸರಿಪಡಿಸಬೇಕೆಂದು ಆಗ್ರಹಿಸಿ ಛಲವಾದಿ ಮಹಾಸಭಾದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು. ರಾಜ್ಯದ ಪರಿಶಿಷ್ಟ 101 ಜಾತಿಗಳ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಆದರೆ ಅದರಿಂದ ಆದಿದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ, ಪಂಗಡಗಳಿಗೆ ಸೇರಿದ ಬಲಗೈನ 19 ಸಮುದಾಯಗಳಿಗೆ ಸಾಮಾಜಿಕ, ಶೈಕ್ಷಣಿಕ ಹಾಗು ಔದ್ಯೋಗಿಕವಾಗಿ ಅನ್ಯಾಯವಾಗುತ್ತದೆ. ಈ ನಡುವೆ ಕರ್ನಾಟಕ ಸರ್ಕಾರ ಮೀಸಲಾತಿ ಪ್ರಮಾಣವನ್ನು ಶೇ. 56ಕ್ಕೆ ಹೆಚ್ಚಿಸಿರುವುದು ತಪ್ಪು ನಡೆಯಾಗಿದೆ. ಮೀಸಲಾತಿ ಪ್ರಮಾಣ ಶೇ. 50 ಮೀರಬಾರದೆಂದು ಸಂವಿಧಾನದಲ್ಲಿ ಉಲ್ಲೇಖವಾಗಿದ್ದರೂ ಅದನ್ನು ಏರಿಕೆ ಮಾಡಿರುವುದು ಹಲವು ಸಂಶಯ ಹುಟ್ಟು ಹಾಕಿದೆ ಎಂದರು. ಒಳ ಮೀಸಲಾತಿ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕುವ ಮೊದಲು ಪರಿಶಿಷ್ಟ ಜಾತಿ ಪ್ರವರ್ಗ ಎ, ಪ್ರವರ್ಗ ಬಿ ಮತ್ತು ಪ್ರವರ್ಗ ಸಿ ಅಡಿಯಲ್ಲಿ ಮೀಸಲಾತಿ ವರ್ಗೀಕರಿಸಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪ್ರವರ್ಗ ಎ (ಮಾದಿಗ) ಅವಕಾಶ ಸೃಷ್ಟಿಸಿರುವುದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ಒಳಮೀಸಲಾತಿ ಕಾನೂನು ಜಾರಿಯಾಗುವ ವರೆಗೆ ಸರ್ಕಾರದ ಯಾವುದೇ ಇಲಾಖೆ, ಸಂಸ್ಥೆ ಹಾಗು ಶೈಕ್ಷಣಿಕ ವಿಶ್ವವಿದ್ಯಾಲಯಗಳಲ್ಲಿ ನೇಮಕಾತಿ ಪ್ರಕ್ರಿಯೆಗೆ ತಡೆ ನೀಡಬೇಕೆಂದು ಆಗ್ರಹಿಸಿದರು.

ಮುಂದಿನ ಶೈಕ್ಷಣಿಕ ವರ್ಷಕ್ಕೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಒಳಮೀಸಲಾತಿ ಅನ್ವಯ ಜಾತಿ ಪ್ರಮಾಣ ಪತ್ರ ಪಡೆಯುವಂತೆ ಅಧಿಕಾರಿಗಳು ಒತ್ತಡ ಹೇರುತ್ತಿದ್ದು, ಆ ಪ್ರಕ್ರಿಯೆಗೆ ತಡೆಯೊಡ್ಡಬೇಕು. ಒಳ ಮೀಸಲಾತಿಯ ಎಲ್ಲಾ ಗೊಂದಲಗಳು ಪರಿಹಾರ ಕಾಣುವ ವರೆಗೆ ಕಂದಾಯ ಇಲಾಖೆಯಲ್ಲಿ ಆರ್‌ಡಿ ನಂಬರ್‌ನೊಂದಿಗೆ ನೀಡಿರುವ ಜಾತಿ ಪ್ರಮಾಣ ಪತ್ರವನ್ನೇ ಪರಿಗಣಿಸಬೇಕೆಂದು ಕೋರಿದರು.

ಪ್ರತಿಭಟನೆಯಲ್ಲಿ ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ಲೋಕೇಶ್ ಅಜ್ಜೇನಹಳ್ಳಿ, ಕೃಷ್ಣದಾಸ್ ಮತ್ತಿತರರಿದ್ದರು.

## ಅಕ್ರಮ ಮದ್ಯ ಮಾರಾಟಕ್ಕೆ ಬ್ರೇಕ್ ಹಾಕಿ

ಹಾಸನ ತಾಲ್ಲೂಕಿನ ಹೂವಿನ ಮಾರನಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ನಡೆಯುತ್ತಿರುವುದರಿಂದ ಗ್ರಾಮದಲ್ಲಿ ಅಶಾಂತಿ ವಾತಾವರಣ ನಿರ್ಮಾಣವಾಗಿದೆ ಎಂದು ಆರೋಪಿಸಿ ಗ್ರಾಮದ ಮಹಿಳೆಯರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಗ್ರಾಮದ ಕೆಲ ಅಂಗಡಿಗಳು ಹಾಗೂ ಮನೆಗಳಲ್ಲಿ ಗುಪ್ತವಾಗಿ ಮದ್ಯ ಮಾರಾಟ ಮಾಡಲಾಗುತ್ತಿದ್ದು, ಇದರಿಂದ ಯುವಕರು ಸೇರಿದಂತೆ ಹಲವು ಮಂದಿ ಮದ್ಯ ವ್ಯಸನಕ್ಕೆ ಒಳಗಾಗುತ್ತಿದ್ದಾರೆ. ಗ್ರಾಮದೊಳಗೆ ಸುಲಭವಾಗಿ ಮದ್ಯ ಸಿಗುತ್ತಿರುವುದರಿಂದ ಮದ್ಯ ಸೇವನೆ ಮಾಡಿದ ಬಳಿಕ ಕೆಲವರು ಆಕ್ರೋಶದಿಂದ ವರ್ತಿಸಿ ಆಗಾಗ ಗಲಾಟೆ ಮಾಡುತ್ತಿರುತ್ತಾರೆ. ಪರಿಣಾಮ ಕುಟುಂಬಗಳಲ್ಲಿ ಶಾಂತಿ ಕದಡಲ್ಪಡುತ್ತಿದೆ.ಮಹಿಳೆಯರು ಮತ್ತು ಮಕ್ಕಳಿಗೆ ತೊಂದರೆ ಉಂಟಾಗುತ್ತಿದೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದರು. ಮದ್ಯ ವ್ಯಸನದ ಕಾರಣದಿಂದಾಗಿ ಕೆಲ ಕುಟುಂಬಗಳಲ್ಲಿ ಪ್ರತಿದಿನ ಕಲಹ ಉಂಟಾಗುತ್ತಿದ್ದು, ಗ್ರಾಮದಲ್ಲಿ ಸಾಮಾಜಿಕ ಸೌಹಾರ್ದತೆಗೆ ಧಕ್ಕೆ ಉಂಟಾಗಿದೆ. ಹಲವರು ದಿನನಿತ್ಯದ ಕೆಲಸ ಕಡೆಗಣಿಸಿ ಮದ್ಯ ಸೇವನೆಗೆ ಒಳಗಾಗುತ್ತಿರುವುದು ಕುಟುಂಬಗಳ ಆರ್ಥಿಕ ಸ್ಥಿತಿಗೂ ಹೊಡೆತ ನೀಡುತ್ತಿದೆ ಎಂದು ದೂರಿದರು.

ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಪೊಲೀಸರು ತಕ್ಷಣ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಅಂಗಡಿ ಮತ್ತು ಮನೆಗಳಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟ ನಿಲ್ಲಿಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಗ್ರಾಮದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಅಗತ್ಯ ಕ್ರಮ ಕೈಗೊಂಡು ಮದ್ಯ ಮಾರಾಟ ಸಂಪೂರ್ಣ ನಿಲ್ಲಿಸಿ ಗ್ರಾಮಸ್ಥರಿಗೆ ಸುರಕ್ಷಿತ ಹಾಗೂ ಶಾಂತ ವಾತಾವರಣ ಒದಗಿಸಬೇಕು ಎಂದು ಮನವಿ ಮಾಡಿದರು. ಪ್ರತಿಭಟನೆಯಲ್ಲಿ ಶೈಲಾ, ಸೌಮ್ಯ, ಜ್ಯೋತಿ, ಶಶಿಕಲಾ, ರಾಜಮ, ನೇತ್ರಾವತಿ, ಸುಮಿತ್ರ, ಭಾಗ್ಯ, ಸಾಕಮ, ರತ್ನಮ ಮೊದಲಾದವರಿದ್ದರು.



## ಸ್ಕಾಲರ್ಸ್ ವರ್ಲ್ಡ್ ಶಾಲೆಯಲ್ಲಿ ಅರಿವು ಕಾರ್ಯಕ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಮ್ಮ ಆರೋಗ್ಯ ನಮ ಕೈಯಲ್ಲಿದ್ದು ಯುವಕರು ದುಶ್ಚಟಗಳಿಗೆ ದಾಸರಾಗಬಾರದು ಎಂದು ಜಿಲ್ಲಾ ಆರೋಗ್ಯ ಇಲಾಖೆಯ ಅಧಿಕಾರಿ ಮಮತಾ ಸಲಹೆ ನೀಡಿದರು.

ಸ್ಕಾಲರ್ಸ್ ವರ್ಲ್ಡ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ತಂಬಾಕಿನಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡಿ, ಯಾರೂ ಕೂಡ ಆರೋಗ್ಯ ನಿರ್ಲಕ್ಷಿಸಬಾರದು. ಆರೋಗ್ಯಕರ ಜೀವನ ನಮದಾಗಬೇಕೆಂದರೆ ಹವ್ಯಾಸಗಳು ಒಳ್ಳೆಯದಾಗಿರಬೇಕು. ಕ್ಷಣಿಕ ಸುಖಕ್ಕಾಗಿ ಅಮಲು ಪದಾರ್ಥ ಸೇವಿಸಿ ಅದಕ್ಕೆ ದಾಸರಾಗಬಾರದು. ಅದರಿಂದ ಆರೋಗ್ಯಕ್ಕೆ ಹಾನಿಕರ, ಆಯಸ್ಸಿಗೆ ಮಾರಕ, ಸಂಪತ್ತಿನ ನಷ್ಟ, ಕುಟುಂಬವು ಛಿದ್ರವಾಗುತ್ತದೆ ಎಂದರು. ಜೀವನ ಅತ್ಯಮೂಲ್ಯ ಉಡುಗೊರೆ. ಅದನ್ನು ಮಾದಕ ವಸ್ತುಗಳಿಗಾಗಿ ವ್ಯರ್ಥ ಮಾಡಿಕೊಳ್ಳಬಾರದು ಎಂದು ಹೇಳಿದರು.

ಶಾಲೆಯ ಆಡಳಿತಾಧಿಕಾರಿ ಡಾ. ಹೆಚ್.ಎನ್.ಚಂದ್ರಶೇಖರ್, ಕಾರ್ಯದರ್ಶಿ ಮಮತಾ ಚಂದ್ರಶೇಖರ್ ಇತರರಿದ್ದರು.

## ಸಂಧಾನಕ್ಕೆ ಕರೆದು ಸಂಬಂಧಿಕರ ಮೇಲೆ ಹಲ್ಲೆ ನಡೆಸಿದ ಮಾಜಿ ಸೈನಿಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪಿತ್ರಾರ್ಜಿತ ಜಮೀನು ವಿಚಾರವಾಗಿ ಉಂಟಾಗಿದ್ದ ಸಮಸ್ಯೆಯನ್ನು ಸಂಧಾನದ ಮೂಲಕ ಬಗೆಹರಿಸುವುದಾಗಿ ಮನೆಗೆ ಕರೆಸಿಕೊಂಡ ಮಾಜಿ ಸೈನಿಕನೊಬ್ಬ ಮೂವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಬಾಗೂರು ಗ್ರಾಮದಲ್ಲಿ ಗುರುವಾರ ನಡೆದಿದೆ. ಗ್ರಾಮದ ವೆಂಕಟೇಶ್ ಎಂಬಾತ ತನ್ನ ಅತ್ತೆ ಮಗ ಶೇಖರ್ ಹಾಗೂ ಅವರ ಪತ್ನಿ ಪ್ರೇಮಕುಮಾರಿ, ಪುತ್ರ ವೆಂಕಟೇಶ್ ಮೇಲೆ ಮಚ್ಚಿನಿಂದ ಮನಬಂದಂತೆ ಹಲ್ಲೆ ನಡೆಸಿದ್ದಾನೆ. ಸೈನಿಕನಾಗಿದ್ದ ವೆಂಕಟೇಶ್ ಸೇವೆಯಿಂದ ನಿವೃತ್ತನಾಗಿ ಕೃಷಿ ಕೆಲಸ ಮಾಡಿಕೊಂಡಿದ್ದ ಎನ್ನಲಾಗಿದೆ.

ಜಮೀನು ವಿಚಾರವಾಗಿ ಅತ್ತೆ ಮಗ ಶೇಖರ್ ಜೊತೆಗೆ ಮನಸ್ತಾಪವಿತ್ತು.



ಇತ್ತೀಚೆಗೆ ಎರಡೂ ಕಡೆಯವರು ಸುಮನಿದ್ದು ತಮ ಪಾಡಿಗೆ ತಾವು ಕೆಲಸ ಮಾಡಿಕೊಂಡಿದ್ದರು. ಆದರೆ, ಗುರುವಾರ ಬೆಳಿಗ್ಗೆ ಮಾಜಿ ಸೈನಿಕ ವೆಂಕಟೇಶ್‌ನು, ಶೇಖರ್‌ನನ್ನು ತನ್ನ ಮನೆಗೆ ಕರೆಸಿಕೊಂಡಿದ್ದ ಎಂದು ತಿಳಿದುಬಂದಿದೆ.

ರಾಜಿ ಸಂಧಾನದ ವೇಳೆ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ. ಹತ್ತಿರದಲ್ಲೇ ಇದ್ದ ಮಚ್ಚಿನಿಂದ ಶೇಖರ್ ತಲೆಗೆ ಬೀಸಿದ್ದಾನೆ. ಜಗಳ ಬಿಡಿಸಲು ಬಂದ ಶೇಖರ್ ಪತ್ನಿ ಪ್ರೇಮಕುಮಾರಿ, ಪುತ್ರ ವೆಂಕಟೇಶ್‌ನ ಕುತ್ತಿಗೆಗೂ ಇರಿದಿದ್ದಾನೆ. ಕೆಲವೇ ಕ್ಷಣಗಳಲ್ಲಿ ಮನೆ ಪೂರ್ತಿ ರಕ್ತದ ಮಡುವಿನಲ್ಲಿ ಮುಳುಗಿದ್ದು ಗಂಭೀರ ಗಾಯಗೊಂಡಿದ್ದ ಮೂವರು ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಅಕ್ಕಪಕ್ಕದ ಮನೆಯವರು ಕೂಡಲೇ ಪೊಲೀಸರಿಗೆ ತಿಳಿಸಿದ್ದಾರೆ. ಅಂಬುಲೆನ್ಸ್ ಮೂಲಕ ಮೂವರನ್ನು ಹಿಮ್ಸ್‌ಗೆ ದಾಖಲಿಸಲಾಯಿತು. ಮಾಜಿ ಸೈನಿಕ ವೆಂಕಟೇಶ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆತನ ಪತ್ನಿ ರಾಣಿ ಹಾಗು ಸಂಬಂಧಿ ರತ್ನ ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ರಾಜೀವ್ ಆಯುರ್ವೇದ ಕಾಲೇಜಿನಲ್ಲಿ ಕೃತಕ ಕೈ-ಕಾಲು ಜೋಡಣೆ ಶಿಬಿರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಏ. 10 ರಿಂದ 12ರ ವರೆಗೆ ಮೂರು ದಿನ ಉಚಿತ ಕೃತಕ ಕೈ-ಕಾಲು ಜೋಡಣಾ ಶಿಬಿರವನ್ನು ನಗರದ ರಾಜೀವ್ ಆಯುರ್ವೇದ ಮಹಾವಿದ್ಯಾಲಯದಲ್ಲಿ ಹಮಿಕೊಳ್ಳಲಾಗಿದೆ ಎಂದು ರೋಟರಿ ಕ್ಲಬ್ ಆಫ್ ಹಾಸನ ಹೊಯ್ಸಳ ಅಧ್ಯಕ್ಷ ವಿಜಯಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ರಾಜೀವ್ ಆಯುರ್ವೇದ ಮಹಾವಿದ್ಯಾಲಯ, ಮಲೆನಾಡು ಇಂಜಿನಿಯರಿಂಗ್ ಕಾಲೇಜು, ರೋಟರಿ ಕ್ಲಬ್ ಆಫ್ ಹಾಸನ ಹೊಯ್ಸಳ, ರೋಟರಿ ಬೆಂಗಳೂರು ಸೌತ್ ಪೆರೇಡ್, ರೋಟರಿ ಬೆಂಗಳೂರು ಲೇಕ್ ಸೈಡ್, ಶ್ರೀ ಭಗವಾನ್ ಮಹಾವೀರ್ ವಿಕಲಾಂಗ ಸಹಾಯತ ಸಮಿತಿ, ಇನ್ನರ್ ವ್ಹೀಲ್ ಕ್ಲಬ್ ಆಫ್ ಹಾಸನ ಹೊಯ್ಸಳ ವೈಸಿರಿ, ಇನ್ನರ್ ವೀಲ್ ಕ್ಲಬ್ ಆಫ್ ಹಾಸನ ಗೋಲ್ಡ್ ಹಾಗು ಭಾರತ ಸೇವಾದಳದಿಂದ ನಡೆಸುತ್ತಿರುವ 6ನೇ ಕಾರ್ಯಕ್ರಮ ಇದಾಗಿದೆ. ಇದುವರೆಗೆ ಸುಮಾರು 1,500 ಜನರು ಶಿಬಿರದ ಪ್ರಯೋಜನ ಪಡೆದಿದ್ದಾರೆ ಎಂದರು.

ರೋಟರಿ ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯಾಗಿದ್ದು, ಕಳೆದ ನೂರು ವರ್ಷಗಳಿಂದ ಹತ್ತು ಹಲವು ಜನಪರ ಕಾರ್ಯಕ್ರಮ ನಡೆಸುತ್ತಿದೆ. ಭಾರತದಲ್ಲಿ ಸಂಸ್ಥೆ ಆರಂಭವಾಗಿ 120 ವರ್ಷ ಪೂರ್ಣಗೊಂಡ ಹಿನ್ನಲೆ ಶಿಬಿರ ಆಯೋಜಿಸಲಾಗಿದೆ.

ದಿವ್ಯಾಂಗರಿಗೆ ವೈದ್ಯಕೀಯ ಪರೀಕ್ಷೆ ನಡೆಸಿ ಅಗತ್ಯವಿರುವ ಕೃತಕ ಕಾಲುಗಳನ್ನು ಉಚಿತವಾಗಿ ನೀಡಲಾಗುತ್ತದೆ. ಜೊತೆಗೆ ಕೃತಕ ಕೈಗಳು (ಮುಂಗೈ) ಹಾಗೂ ಪೋಲಿಯೋ ಪೀಡಿತರಿಗಾಗಿ ಕ್ಯಾಲಿಪರ್ಸ್‌ಗಳನ್ನೂ ನೀಡಲಾಗುವುದು ಎಂದು ತಿಳಿಸಿದರು.

ಈ ಶಿಬಿರವು ಸಂಪೂರ್ಣ ಉಚಿತವಾಗಿದ್ದು, ಹೊರ ಜಿಲ್ಲೆಗಳಿಂದ ಆಗಮಿಸುವ ಫಲಾನುಭವಿಗಳಿಗೆ ಉಚಿತ ಊಟ ಹಾಗು ವಸತಿ ವ್ಯವಸ್ಥೆ ಮಾಡಲಾಗಿದೆ. ಹೆಸರು ನೋಂದಣಿಗೆ ಮೊ.ನಂ. 9844046527, 9449644267 ಇಲ್ಲಿಗೆ ಸಂಪರ್ಕಿಸಬಹುದು ಎಂದರು.


ರೋಟರಿ ಕ್ಲಬ್ ಹಾಸನ ಹೊಯ್ಸಳ ನಿರ್ದೇಶಕ ಡಾ.ರವಿಕುಮಾರ್, ಮೋಹನ್, ಸೋಮೇಶ್, ಭಾರತ್ ಸೇವಾದಳದ ವಲಯ ಸಂಘಟಕಿ ವಿ.ಎಸ್.ರಾಣಿ, ಸದಸ್ಯ ವಿನೇಶ್ ಕುಮಾರ್ ಇದ್ದರು.

## ಎಸ್‌ಡಿಎಂಸಿ ಸದಸ್ಯರು ಶಾಲೆ ಅಭಿವೃದ್ಧಿಗೆ ಶ್ರಮಿಸಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಶಾಲಾ ಮಟ್ಟದಲ್ಲಿ ಎಸ್‌ಡಿಎಂಸಿ ಸದಸ್ಯರು ಸಕ್ರಿಯವಾಗಿ ಕಾರ್ಯನಿರ್ವಹಿಸಿದರೆ ಪ್ರತಿ ಸರ್ಕಾರಿ ಶಾಲೆ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಶಾಸಕ ಸಿಮೆಂಟ್ ಮಂಜು ಅವರ ಪತ್ನಿ ಪ್ರತಿಭಾ ಮಂಜುನಾಥ್ ಹೇಳಿದರು.

ತಾಲೂಕಿನ ರಾಜೇಂದ್ರಪುರ ಕಿರಿಯ ಪ್ರಾಥಮಿಕ ಶಾಲೆಯ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಗುರುವಾರ ಉದ್ಘಾಟಿಸಿ ಮಾತನಾಡಿದ ಅವರು, ಎಸ್‌ಡಿಎಂಸಿ ಶಾಲೆಯ ಸರ್ವತೋಮುಖ ಪ್ರಗತಿಗಾಗಿ ರಚಿಸಲ್ಪಟ್ಟ ಸಮಿತಿಯಾಗಿದ್ದು, ಶಾಲೆಗೆ ಅಗತ್ಯವಾದ ಮೂಲಸೌಕರ್ಯ ಒದಗಿಸುವ ಪ್ರಮುಖ ಜವಾಬ್ದಾರಿ ಈ ಸಮಿತಿಯದ್ದಾಗಿದೆ ಎಂದು ತಿಳಿಸಿದರು. ಗ್ರಾಮದ ಪ್ರತಿ ಎಸ್‌ಡಿಎಂಸಿ ಸದಸ್ಯರೂ ತಮ ಶಾಲೆಯ ಅಭಿವೃದ್ಧಿಯತ್ತ ಆಸಕ್ತಿಯಿಂದ ಗಮನಹರಿಸಿ, ಉತ್ತಮ ಶಿಕ್ಷಣ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಪ್ರತಿಯೊಬ್ಬರೂ ಶಾಲೆಯ ಪ್ರಗತಿಗೆ ಶ್ರಮಿಸಬೇಕು ಎಂದು ಅವರು ಮನವಿ ಮಾಡಿದರು.



ನಮೂರ ಶಾಲೆ ನಮ ಶಾಲೆ ಎಂಬ ಭಾವನೆಯೊಂದಿಗೆ ಶಾಲೆಯೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡು ಅದರ ಆಗುಹೋಗುಗಳಿಗೆ ಸ್ಪಂದಿಸಬೇಕು. ಶಾಲೆಗೆ ಅಗತ್ಯವಿರುವ ಸೌಕರ್ಯಗಳನ್ನು ಜನಪ್ರತಿನಿಧಿಗಳ ಗಮನಕ್ಕೆ ತಂದು, ಅವರ ಅನುದಾನಗಳನ್ನು ಪಡೆದು ಶಾಲೆಗಳನ್ನು ಅಭಿವೃದ್ಧಿಪಡಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ರಾಜೇಂದ್ರಪುರ ಶಾಲೆಯ ಅಭಿವೃದ್ಧಿಯಲ್ಲಿ ಎಸ್‌ಡಿಎಂಸಿ ಸದಸ್ಯರು, ಹಳೆಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರ ಸಹಕಾರ ಗಮನಾರ್ಹವಾಗಿದೆ. ಇತರ ಶಾಲೆಗಳಿಗೆ ಮಾದರಿಯಾಗಿದೆ ಎಂದು ಹೇಳಿದರು.

ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಆರ್.ಎಲ್. ದೇವರಾಜ್ ಮಾತನಾಡಿ, ನಮ ಕಾಲದಲ್ಲಿ ಪಠ್ಯಾಭ್ಯಾಸಕ್ಕಿಂತ ಮಾನವೀಯ ಸಂಬಂಧಗಳಿಗೆ ಹೆಚ್ಚು ಮಹತ್ವ ಇತ್ತು. ಇಂದು ಗುರು ಮಾಹಿತಿ ನೀಡುವ ವ್ಯವಸ್ಥೆಯಾಗಿದ್ದು, ಶಿಷ್ಯ ಮಾಹಿತಿ ಸಂಗ್ರಹಿಸುವ ವ್ಯವಸ್ಥೆಯಾಗುತ್ತಿರುವಂತಾಗಿದೆ. ಇವರಿಬ್ಬರ ನಡುವೆ ನಿಕಟ ಬಾಂಧವ್ಯ ಕಡಿಮೆಯಾಗುತ್ತಿದೆ. ಪ್ರೀತಿ ಹಾಗೂ ಆತೀಯತೆ ಕುಸಿಯುತ್ತಿದ್ದು, ಎಲ್ಲವೂ ಯಾಂತ್ರಿಕವಾಗುತ್ತಿದೆ ಎಂಬ ಆತಂಕ ವ್ಯಕ್ತಪಡಿಸಿದರು.

ಮುರಾಜಿ ದೇಸಾಯಿ ವಸತಿ ಶಾಲೆ ಬ್ಯಾಕರವಳ್ಳಿಯ ಪ್ರಾಂಶುಪಾಲ ಶತೇಂದ್ರಕುಮಾರ್ ಪ್ರಧಾನ ಭಾಷಣ ಮಾಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಚನ್ನಕೇಶವ, ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ಮುರಳಿ ಮೋಹನ್, ಕ.ರಾ.ಸ.ನೌ. ಸಂಘದ ತಾಲೂಕು ಅಧ್ಯಕ್ಷ ಶಾಂತ, ಕೆ.ಎಸ್.ಇ.ಜಿ.ಎ ರಾಜ್ಯ ಸಂಘಟನಾ ಕಾರ್ಯದರ್ಶಿ ವೈ.ಎಸ್. ತಮಣ್ಣ ಶೆಟ್ಟಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಸೌಜನ್ಯ ಸುರೇಶ್, ಬಸವೇಶ್ವರ ಜಾತ್ರಾ ಸಮಿತಿ ಅಧ್ಯಕ್ಷ ಕುಮಾರ್, ಸಮೂಹ ಸಂಪನೂಲ ವ್ಯಕ್ತಿ ನಿರಂಜನ್ ಮೂರ್ತಿ, ಶಾಲಾ ಮುಖ್ಯ ಶಿಕ್ಷಕ ಪುಟ್ಟೇಗೌಡ, ಸಹ ಶಿಕ್ಷಕ ತ್ರಿಲೋಚನ್, ಹಿರಿಯ ವಿದ್ಯಾರ್ಥಿ ಬಳಗದ ಉಪಾಧ್ಯಕ್ಷ ಸುರೇಶ್, ಕಾರ್ಯದರ್ಶಿ ಪ್ರಕಾಶ್, ಖಜಾಂಚಿ ಚಂದ್ರು ಇತರರಿದ್ದರು.

## ಮಾ.13ರಿಂದ ಮೂರು ದಿನ ಸೀರೆ ಪ್ರದರ್ಶನ-ಮಾರಾಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮೈಸೂರಿನ ಕಂಕಣ ಸಿಲ್ಕ್ಸ್ ವತಿಯಿಂದ ನಗರದ ಅಶೋಕ ಹೋಟೆಲ್‌ನಲ್ಲಿ ಸೀರೆಗಳ ಮಾರಾಟ ಮತ್ತು ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಆಯೋಜಕಿ ರಶ್ಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಮಾ. 13, 14 ಮತ್ತು 15 ರಂದು ಮೂರು ದಿನ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ಪ್ರತಿದಿನ ಬೆಳಿಗ್ಗೆ 11 ರಿಂದ ರಾತ್ರಿ 8ರ ವರೆಗೆ ಸಾರ್ವಜನಿಕರು ಭೇಟಿ ನೀಡಬಹುದು. ಕಾಂಚಿಪುರಂ ಸಿಲ್ಕ್ಸ್, ಮೈಸೂರು ಸಿಲ್ಕ್ಸ್, ಬನಾರಸ್ ಸಿಲ್ಕ್ಸ್, ಮಾಡೆಲ್ ಸಿಲ್ಕ್ಸ್, ಲೆನಿನ್ ಮತ್ತು ಕಾಟನ್ ಸೀರೆಗಳು ರಿಯಾಯಿತಿ ದರದಲ್ಲಿ ಸಿಗುತ್ತವೆ ಎಂದರು.



ಮಹಿಳೆಯರಿಗೆ ಮತ್ತು ಮಹಿಳಾ ನೌಕರರಿಗೆ ಎಲ್ಲಾ ತರಹದ ಸೀರೆಗಳು ಲಭ್ಯವಿದ್ದು, ಶೇ. 50ರ ವರೆಗೆ ರಿಯಾಯಿತಿ ನೀಡಲಾಗುವುದು. ವಿವಿಧ ಮಾದರಿಯ 60 ಸಾವಿರ ಸೀರೆಗಳು ಪ್ರದರ್ಶನಕ್ಕಿರಲಿವೆ ಎಂದರು. ಪತ್ರಕರ್ತ ತೌಫಿಕ್ ಅಹಮದ್ ಹಾಜರಿದ್ದರು.

# ಬಿಳಿಸುಳಿ ರೋಗಕ್ಕೆ ವರ್ಷವಾದರೂ ಸಿಗದ ಪರಿಹಾರ

## 5,650 ಹೆಕ್ಟೇರ್ ಬೆಳೆ ನಾಶ । ರೈತರಿಗೆ ಸಲಹೆ ನೀಡುತ್ತಿರುವ ಕೃಷಿ ಇಲಾಖೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಕಳೆದ ಬಾರಿ ಮುಸುಕಿನ ಜೋಳ ಬೆಳೆಗೆ ತಗುಲಿದ ಬಿಳಿಸುಳಿ ರೋಗದಿಂದ ಜಿಲ್ಲೆಯ ಅನ್ನದಾತರು ತೀವ್ರ ನಷ್ಟಕ್ಕೀಡಾಗಿದ್ದು, ಸರ್ಕಾರದಿಂದ ಬಿಡಿಗಾಸು ಪರಿಹಾರ ಸಿಗದೆ ಪರಿತಪಿಸುವಂತಾಗಿದೆ.

ಬಿಳಿ ಸುಳಿ ರೋಗದಿಂದ ಭಾರೀ ಸಮಸ್ಯೆಯಾದ ಹಿನ್ನಲೆಯಲ್ಲಿ ರಾಜ್ಯ ಹಾಗೂ ಕೇಂದ್ರದಿಂದ ವಿಜ್ಞಾನಿಗಳ ತಂಡ ಭೇಟಿ ನೀಡಿ ಪರಿಶೀಲಿಸಿತು. ಕಳಪೆ ಬಿತ್ತನೆ ಬೀಜ ಹಾಗೂ ಹವಾಮಾನ ವೈಪರೀತ್ಯದಿಂದ ರೋಗ ಉಲ್ಬಣಗೊಂಡಿದೆ ಎಂಬ ವರದಿಯೂ ಬಿಡುಗಡೆ ಆಯಿತು. ಸೂಕ್ತ ಪರಿಹಾರ ನೀಡಬೇಕೆಂದು ಜಿಲ್ಲೆಯ ರೈತರು ಆಗ್ರಹಿಸಿದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪರಿಹಾರ ಬಿಡುಗಡೆ ಮಾಡುವ ಭರವಸೆ ನೀಡಿದ್ದರು. ಆದರೆ, ಒಂದು ರೂಪಾಯಿ ಪರಿಹಾರ ನೀಡಲಿಲ್ಲ. ಬೆಳೆ ವಿಮೆ ಮಾಡಿಸಿಕೊಂಡಿದ್ದ ರೈತರಿಗೂ ಅಷ್ಟೇನೂ ಲಾಭವಾಗಿಲ್ಲ. ಹೀಗಾಗಿ ಈ ವರ್ಷ ಮುಸುಕಿನ ಜೋಳ ಬಿತ್ತನೆಯಿಂದ ದೂರ ಉಳಿಯುವ ಚಿಂತನೆಯನ್ನು ರೈತರು ನಡೆಸಿದ್ದಾರೆ.

ಜಿಲ್ಲೆ 2,29,974 ಹೆಕ್ಟೇರ್ ಬಿತ್ತನೆ ಪ್ರದೇಶ ಹೊಂದಿದ್ದು ಕಳೆದ ವರ್ಷ 98,010 ಹೆಕ್ಟೇರ್‌ನಲ್ಲಿ ಮುಸುಕಿನ ಜೋಳ ಬಿತ್ತನೆಯಾಗಿತ್ತು. ಅಂದರೆ ಒಟ್ಟು ಬಿತ್ತನೆ ಪ್ರದೇಶದ ಶೇ. 40 ರಷ್ಟು ಭೂಮಿಯಲ್ಲಿ ಮುಸುಕಿನ ಜೋಳ ಬೆಳೆ ಕೈಗೊಳ್ಳಲಾಗಿದೆ. ಆದರೆ ಈ ಬಾರಿ ಅದರ ಪ್ರಮಾಣ ಮತ್ತಷ್ಟು ಕುಸಿಯುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. 5,650 ಹೆಕ್ಟೇರ್ ಜೋಳ ಬಿಳಿ ಸುಳಿ ರೋಗಕ್ಕೆ ಸಿಲುಕಿ ಸಂಪೂರ್ಣ ನಾಶವಾಗಿದೆ.

ಮಹತ್ವದ ಬೆಳೆಯು ರೋಗಕ್ಕೆ ಸಿಲುಕಿದ್ದರಿಂದ ಕೃಷಿ ಇಲಾಖೆ ನೇತೃತ್ವದಲ್ಲಿ ವಿಜ್ಞಾನಿಗಳ ತಂಡ ಚನ್ನರಾಯಪಟ್ಟಣ, ಹೊಳೆನರಸೀಪುರ, ಅರಸೀಕೆರೆ ಭಾಗದಲ್ಲಿ ಬೆಳೆ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಅದಕ್ಕೆ ಸೂಕ್ತ ಪರಿಹಾರ ನೀಡುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ಲಿಖಿತ ಪತ್ರವನ್ನು ಬರೆದಿದ್ದರು. ಯಾವುದಕ್ಕೂ ಸ್ಪಂದನೆ ಸಿಕ್ಕಿಲ್ಲ.

### ರೈತರಿಗೆ ಹೆಚ್ಚಿದ ಅರಿವು ಕಾರ್ಯಕ್ರಮ

2026ರ ಮೇ ತಿಂಗಳಲ್ಲಿ ಮುಸುಕಿನ ಜೋಳ ಬಿತ್ತನೆ ಕಾರ್ಯ ಶುರುವಾಗುವುದರಿಂದ ರೈತರಿಗೆ ಈಗಿನಿಂದಲೇ ಬಿಳಿಸುಳಿ ರೋಗ ಹತೋಟಿ ಸಂಬಂಧ ಅರಿವು ಮೂಡಿಸುವ ಪ್ರಯತ್ನವನ್ನು ಕೃಷಿ ಇಲಾಖೆ ಮಾಡುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರ ನಿರ್ದೇಶನ ಹಿನ್ನಲೆಯಲ್ಲಿ ಕರಪತ್ರ ಹಂಚಲಾಗುತ್ತಿದೆ. ಜೊತೆಗೆ ಈಗಾಗಲೇ ಎರಡು ಬಾರಿ ರೈತ ಮುಖಂಡೊಂದಿಗೆ ಸಭೆ ಸಹ ನಡೆಸಲಾಗಿದೆ.

ಬಿತ್ತನೆಗೂ ಮೊದಲು ಏಪ್ರಿಲ್ ಒಳಗೆ ಆಳವಾದ ಮಾಗಿ ಉಳುಮೆ ಮಾಡುವುದು. ಹಿಂದಿನ ವರ್ಷ ಬಿಳಿ ಸುಳಿ ರೋಗ ಕಾಣಿಸಿಕೊಂಡ ತಾಕುಗಳಲ್ಲಿ ಪುನ: ಮುಸುಕಿನ ಜೋಳವನ್ನು ಬೆಳೆಯುವುದರ ಬದಲು ದ್ವಿದಳ ಧಾನ್ಯಗಳಾದ ತೊಗರಿ, ಅಲಸಂದೆ, ಉದ್ದು, ಅವರೆ, ನೆಲಗಡಲೆ ಅಥವಾ ಇತರ ಬೆಳೆಗಳೊಂದಿಗೆ ಬೆಳೆ ಪರಿವರ್ತನೆ ಮಾಡುವುದು. ದೀರ್ಘಾವಧಿ ರಾಗಿ ತಳಿಗಳಾದ ಎಂ.ಆರ್.-1, ಎಂಆರ್ 6ಗಳನ್ನು ಪರ್ಯಾಯ ಬೆಳೆಯಾಗಿ ಬೆಳೆಯಬಹುದು. ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಮಧ್ಯಮಾವಧಿ ರಾಗಿ ತಳಿಗಳಾದ ಜಿಪಿಯು-28, ಎಂಎಲ್ 365, ಕೆಎಂಆರ್ 301, ಜಿಪಿಯು 66 ತಳಿಗಳನ್ನು ಪರ್ಯಾಯವಾಗಿ ಬೆಳೆಯುವುದು. ಬಿತ್ತನೆ ಸಮಯದಲ್ಲಿ ಪ್ರತಿ ಸಾಲಿನಿಂದ ಸಾಲಿಗೆ 60 ಸೆಂ.ಮೀ. ಮತ್ತು ಗಿಡದಿಂದ ಗಿಡಕ್ಕೆ 25 ಸೆಂ.ಮೀ. ಅಂತರದೊಂದಿಗೆ ಬಿತ್ತನೆ ಮಾಡುವುದು. ಮಣ್ಣಿನಲ್ಲಿ ಹೆಚ್ಚಿನ ತೇವಾಂಶವಿರುವ ಸಂದರ್ಭ ಹಾಗು ಹೆಚ್ಚು ಮಳೆಯಾಗುವ ಸಂದರ್ಭದಲ್ಲಿ ಬಿತ್ತನೆ ಮುಂದೂಡಬೇಕು. ಬಿತ್ತನೆ ಬೀಜಗಳನ್ನು ಅಧಿಕೃತ ಬಿತ್ತನೆ ಬೀಜ ಮಾರಾಟಗಾರರಿಂದ ಖರೀದಿಸುವುದು ಹಾಗೂ ಕಡ್ಡಾಯವಾಗಿ ಮಾರಾಟಗಾರರಿಂದ ಬಿಲ್ ಪಡೆಯಬೇಕು ಎಂದು ಸಲಹೆ ನೀಡಿದೆ.

# ಬೇಲೂರಿನಲ್ಲೂ ಅಡುಗೆ ಅನಿಲಕ್ಕೆ ಅಭಾವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ಮಧ್ಯ ಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಈಗ ಸ್ಥಳೀಯ ಮಟ್ಟದಲ್ಲಿಯೂ ಕಾಣಿಸಿಕೊಳ್ಳತೊಡಗಿದ್ದು, ಪಟ್ಟಣದಲ್ಲಿ ವಾಣಿಜ್ಯ ಹಾಗೂ ಗೃಹಬಳಕೆ ಗ್ಯಾಸ್ ಸಿಲಿಂಡರ್‌ಗಳ ಕೊರತೆ ಉಂಟಾಗಿದೆ.

ಪಟ್ಟಣದ ಹಲವಾರು ಹೋಟೆಲ್‌ಗಳಲ್ಲಿ ದಿನನಿತ್ಯ ಸುಮಾರು ಏಳರಿಂದ ಎಂಟು ವಾಣಿಜ್ಯ ಸಿಲಿಂಡರ್‌ಗಳನ್ನು ಬಳಸಲಾಗುತ್ತಿತ್ತು. ಕಳೆದ ಮೂರು ದಿನಗಳಿಂದ ಕೇವಲ ಎರಡು ಸಿಲಿಂಡರ್‌ಗಳು ಮಾತ್ರ ಪೂರೈಕೆಯಾಗುತ್ತಿರುವುದರಿಂದ ಹೋಟೆಲ್‌ಗಳ ಕಾರ್ಯಾಚರಣೆಯಲ್ಲಿ ವ್ಯತ್ಯಯ ಉಂಟಾಗಿದೆ. ಕೆಲ ಹೋಟೆಲ್‌ಗಳಲ್ಲಿ ಗ್ಯಾಸ್ ಕೊರತೆಯಿಂದ ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ಮಾತ್ರ ಅಡುಗೆ ಮಾಡುವಂತಹ ಪರಿಸ್ಥಿತಿ ಎದುರಾಗಿದೆ ಎಂದು ಮಾಲೀಕರು ತಿಳಿಸಿದ್ದಾರೆ.

ಇದೇ ಸಮಸ್ಯೆ ಸಿಹಿ ತಿಂಡಿ ತಯಾರಿಕಾ ಅಂಗಡಿಗಳಿಗೂ ತಟ್ಟಿದೆ. ಸಾಮಾನ್ಯವಾಗಿ ದಿನಕ್ಕೆ ಎಂಟರಿಂದ ಹತ್ತು ವಾಣಿಜ್ಯ ಸಿಲಿಂಡರ್‌ಗಳನ್ನು ಬಳಸುತ್ತಿದ್ದ ಸಿಹಿ ಪದಾರ್ಥ ತಯಾರಿಕಾ ಅಂಗಡಿಗಳಿಗೆ ಕಳೆದ ನಾಲ್ಕು ದಿನಗಳಿಂದ ಸಮರ್ಪಕವಾಗಿ ಗ್ಯಾಸ್ ಸಿಲಿಂಡರ್‌ಗಳು ಪೂರೈಕೆಯಾಗುತ್ತಿಲ್ಲ. ಮುಂದಿನ ಯುಗಾದಿ ಹಬ್ಬದ ಹಿನ್ನಲೆಯಲ್ಲಿ ಹೆಚ್ಚಿನ ಆರ್ಡರ್‌ಗಳನ್ನು ಸ್ವೀಕರಿಸಿದ್ದ ಕೆಲವು ಅಂಗಡಿಗಳು ಈಗ ಸಂಕಷ್ಟಕ್ಕೆ ಸಿಲುಕಿವೆ. ವಿಶೇಷವಾಗಿ ಹೋಳಿಗೆ ಹಾಗೂ ಕುರುಕು ತಿಂಡಿಗಳ ತಯಾರಿಕೆಗೆ ಗ್ಯಾಸ್ ಕೊರತೆಯಿಂದ ಅಡಚಣೆ ಉಂಟಾಗಿದೆ ಎಂದು ಅಂಗಡಿ ಮಾಲೀಕರು ತಿಳಿಸಿದ್ದಾರೆ.

ಗೃಹಬಳಕೆ ಗ್ಯಾಸ್ ಸಿಲಿಂಡರ್‌ಗಳ ಕೊರತೆಯೂ ಸಾರ್ವಜನಿಕರನ್ನು ಕಂಗೆಡಿಸಿದೆ. ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಜನರು ನೇರವಾಗಿ ಗ್ಯಾಸ್ ಏಜೆನ್ಸಿಗಳಿಗೆ ತೆರಳಿ ಬುಕ್ಕಿಂಗ್ ಮಾಡುತ್ತಿದ್ದಾರೆ. ಬುಕ್ ಮಾಡಿದ ಬಳಿಕ ಸುಮಾರು 28 ದಿನಗಳ ನಂತರ ಮಾತ್ರ ಸಿಲಿಂಡರ್ ದೊರೆಯಲಿದೆ ಎಂದು ಏಜೆನ್ಸಿಯವರು ತಿಳಿಸುತ್ತಿದ್ದಾರೆ.

ಪಟ್ಟಣದ ಚನ್ನಕೇಶವ ಗ್ಯಾಸ್ ಏಜೆನ್ಸಿಯಲ್ಲಿ ಮೊದಲೇ ಬುಕ್ಕಿಂಗ್ ಮಾಡಿದ್ದವರಿಗೂ ಸಿಲಿಂಡರ್ ದೊರೆಯದೆ ಜನರು ಪರದಾಡುತ್ತಿರುವುದು ಕಂಡುಬರುತ್ತಿದೆ. ಗ್ಯಾಸ್ ಸಿಲಿಂಡರ್ ಅಭಾವದಿಂದ ಹೋಟೆಲ್ ವಲಯ ಹಾಗೂ ಸಾರ್ವಜನಿಕ ಜೀವನದ ಮೇಲೂ ಪರಿಣಾಮ ಬೀರುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಸಮಸ್ಯೆ ಪರಿಹರಿಸಿ ವಾಣಿಜ್ಯ ಹಾಗೂ ಗೃಹಬಳಕೆ ಗ್ಯಾಸ್ ಸಿಲಿಂಡರ್‌ಗಳನ್ನು ಸಮರ್ಪಕವಾಗಿ ಪೂರೈಸುವಂತೆ ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಆಗ್ರಹಿಸಿದ್ದಾರೆ.

# ನಾಯಿ ಕಡಿತದ ಲಸಿಕೆ ಬಗ್ಗೆ ಜಾಗೃತಿ ಮೂಡಿಸಿ: ಜಿಲ್ಲಾಧಿಕಾರಿ



ಹಾಸನ: ಜಿಲ್ಲೆಯಲ್ಲಿ ಕಳೆದ ತಿಂಗಳು ಸುಮಾರು 2500 ಮನುಷ್ಯರಿಗೆ ಬೀದಿ ನಾಯಿಗಳು ಕಚ್ಚಿರುವ ಪ್ರಕರಣಗಳು ವರದಿಯಾಗಿವೆ. ಲಸಿಕೆ ಪಡೆಯದೇ ಸಾವಿಗೀಡಾಗಿರುವ ಪ್ರಕರಣಗಳಿವೆ. ಆದ್ದರಿಂದ ನಾಯಿಗಳು ಕಚ್ಚಿದ ತಕ್ಷಣ ಲಸಿಕೆ ಪಡೆಯಲು ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಯೋಜನೆಯಡಿ ಹಾಗೂ ತೆರಿಗೆಗಳ ವಸೂಲಾತಿ ಹಾಗೂ ಎ.ಬಿ.ಸಿ ನಿಯಮ ಅನುಷ್ಠಾನದಲ್ಲಿ ಸಾಧಿಸಿರುವ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಹಿಂದಿನ ವರ್ಷ 28,672 ಜನರಿಗೆ ನಾಯಿಗಳು ಕಚ್ಚಿರುವ ಪ್ರಕರಣ ಹಾಗೂ 2 ಸಾವು ಉಂಟಾಗಿರುವುದರಿಂದ ಎಚ್ಚರ ವಹಿಸಬೇಕು. ನಾಯಿಗಳು ಕಚ್ಚಿದ ತಕ್ಷಣ ಆಸ್ಪತ್ರೆಗೆ ಬರುವುದರಿಂದ ಮಾಹಿತಿ ಸಿಗುತ್ತದೆ. ಮಾಹಿತಿಯನ್ನು ಪಶುಪಾಲನಾ ಇಲಾಖೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ಪಶು ಪಾಲನಾ ಇಲಾಖೆಗೆ ಮಾಹಿತಿ ತಲುಪಿದ ನಂತರ ನಾಯಿಗಳಿಗೆ ಲಸಿಕೆಯನ್ನು ನೀಡಬೇಕು ರೇಬಿಸ್ ಕಂಡುಬಂದಲ್ಲಿ ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಬೀದಿ ನಾಯಿಗಳ ಹಾವಳಿ ತಪ್ಪಿಸಲು ಸುಪ್ರೀಂ ಕೋರ್ಟ್ ಆದೇಶದಂತೆ ಹಾಗೂ ಸರ್ಕಾರದ ಕಾರ್ಯದರ್ಶಿಯವರ ನಿರ್ದೇಶನ ಕಡ್ಡಾಯವಾಗಿ ಸ್ಥಳೀಯ ಸಂಸ್ಥೆಗಳಿಗೆ ಪಾಲಿಸಬೇಕು ಎಂದು ತಿಳಿಸಿದರು.

ರಸ್ತೆಗಳು, ಪುಟ್ ಪಾತ್ ತೆರವು ಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡಬೇಕು, ಜಾನುವಾರುಗಳನ್ನು ರಸ್ತೆಗೆ ಬಿಡುವುದರಿಂದ ಅಪಘಾತಗಳು ಹೆಚ್ಚಾಗುತ್ತಿವೆ. ಬೇಸಿಗೆ ಆರಂಭವಾಗುತ್ತಿದೆ, ಯಾವ ವಾರ್ಡ್ ಗಳಲ್ಲಿ ನೀರಿನ ಸಮಸ್ಯೆ ಎದುರಾಗಬಹುದು ಎಂಬುದನ್ನು ಪಟ್ಟಿ ಮಾಡಿರಬೇಕು. ಸಮಸ್ಯೆ ಬಗೆಹರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಹಾಗೂ ಜಿಲ್ಲಾ ಮಟ್ಟದಲ್ಲಿ ಸಹಾಯವಾಣಿ ತೆರೆಯಬೇಕು ಎಂದು ತಿಳಿಸಿದರು.

# ಮಗುವಿನ ಕಲಿಕಾ ಆಸಕ್ತಿಗೆ ಅನುಗುಣ ವಿದ್ಯೆ ನೀಡಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ಮಕ್ಕಳನ್ನು ಕೇವಲ ಪಠ್ಯದ ಕಲಿಕೆಗಷ್ಟೆ ಬಲವಂತವಾಗಿ ದೂಡುವ ಬದಲು ಅವರ ಕಲಿಕಾ ಆಸಕ್ತಿ ಯಾವುದು ಎಂಬುದರ ಕುರಿತಾಗಿ ತಿಳಿದು ಆ ಕ್ಷೇತ್ರದಲ್ಲಿ ಹೆಚ್ಚು ಕಲಿಯಲು ಅವಕಾಶ ಮಾಡಿಕೊಟ್ಟಾಗ ಮಕ್ಕಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಹಿರಿಸಾವೆ ಸಾಯಿ ಸಿದ್ದಾಶ್ರಮದ ಮುಖ್ಯಸ್ಥ ಗುರುಮೂರ್ತಿ ತಿಳಿಸಿದರು.

ಶ್ರವಣಬೆಳಗೊಳ ಹೋಬಳಿ ದಮನಿಂಗಳ ಗ್ರಾಮದಲ್ಲಿರುವ ರಚನಾ ಪಬ್ಲಿಕ್ ಸ್ಕೂಲ್‌ನ 2025-26ನೇ ಸಾಲಿನ ವಾರ್ಷಿಕೋತ್ಸವ ರಚನಾ ಚಿತ್ತಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪೋಷಕರು ತಮ ಮಕ್ಕಳನ್ನು ಪ್ರತಿನಿತ್ಯ ಓದು ಎಂಬ ಒತ್ತಡ ಹಾಕುತ್ತಾರೆ. ಮಕ್ಕಳನ್ನು ಓದಿಸುವ ಜೊತೆಗೆ ಅವರಲ್ಲಿರುವ ಆಸಕ್ತಿಯನ್ನು ಗುರುತಿಸಿ ಆ ದಿಕ್ಕಿನಲ್ಲಿ ಪ್ರೋತ್ಸಾಹಿಸುವ ಕೆಲಸವಾಗಬೇಕು. ಕ್ರೀಡೆ, ಸಂಗೀತ, ಕಲೆ, ನೃತ್ಯ ಸೇರಿದಂತೆ ಪಠ್ಯದಾಚೆಗಿನ ವಿದ್ಯೆಗಳಲ್ಲಿ ಮಕ್ಕಳನ್ನು ತೊಡಗಿಸಿ ಅತ್ಯುತ್ತಮವಾದ ಕಲಿಕೆಗೆ ಅವಕಾಶ ಮಾಡಿಕೊಟ್ಟಲ್ಲಿ ಅವರು ನಾಡಿನ ಆಸ್ತಿಗಳಾಗುತ್ತಾರೆ.

ಇಂದು ಸಮಾಜದಲ್ಲಿ ಹತ್ತಾರು ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರ ಪಟ್ಟಿಯಲ್ಲಿ ಮೊದಲಿಗರಾಗಿ ಸಿಗುವವರು ಗ್ರಾಮೀಣ ಪ್ರತಿಭೆಗಳು, ಗ್ರಾಮೀಣ ಮಕ್ಕಳಿಗಿರುವ ಗಟ್ಟಿತನ, ಆತವಿಶ್ವಾಸ, ಸಾಧಿಸುವ ಛಲ ಪಟ್ಟಣದ ಮಕ್ಕಳಿಗೆ ಆಷ್ಟಾಗಿ ಇರುವುದಿಲ್ಲ. ಇಂದು ಶಾಲೆಗಳಲ್ಲಿ ನಡೆಯುವ ವಾರ್ಷಿಕೋತ್ಸವಗಳು ತಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆಯಾಗಿದೆ. ಗ್ರಾಮೀಣ ಭಾಗದಲ್ಲಿ ಶಾಲೆ ತೆರೆದು ಗುಣಮಟ್ಟದ ಶಿಕ್ಷಣದ ಜೊತೆಗೆ ಮಕ್ಕಳ ಪ್ರತಿಭೆಯ ಅನಾವರಣಕ್ಕೆ ಮುಂದಾಗಿರುವ ರಚನಾ ಸ್ಕೂಲ್‌ನ ಆಡಳಿತ ಮಂಡಳಿ ಕಾರ್ಯ ಮೆಚ್ಚುವಂತಹುದು ಎಂದರು.

ಸುಳ್ಯ ಇಂಜನಿಯರಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು ಹಾಗೂ ಗಾಯಕ ಎಂ.ವಿ.ಕೃಷ್ಣರಾಜು ಮಾತನಾಡಿ, ಭಗವಂತ ನೀಡಿರುವ ಅಪರೂಪವಾದ ಮಾನವ ಜನವನ್ನು ಸಾರ್ಥಕತೆ ಪಡಿಸಿಕೊಳ್ಳುವ ಕೆಲಸ ಮಾಡಬೇಕು. ತಾವು ಬೆಳೆದು ಇತರರನ್ನು ಬೆಳೆಸುವ ಗುಣ ಬೆಳೆಸಿಕೊಳ್ಳಬೇಕು. ನಮ ಭವಿಷ್ಯಕ್ಕೆ ಕಾರಣವಾಗುವ ಪೋಷಕರು ಮತ್ತು ಗುರುಗಳ ಋಣ ತೀರಿಸುವ ಕೆಲಸ ಮಾಡಬೇಕೆಂದರು. ಸ್ವಾಮಿ ವಿವೇಕಾನಂದರು ಹೇಳಿರುವಂತೆ ಅನ್ನ ಕೊಟ್ಟರೆ ಒಂದು ದಿನ ನೆರವಾದಂತೆಮ ಹಣ ನೀಡಿದರೇ ಕೆಲವು ದಿನ ಸಹಾಯ ಮಾಡಿದಂತೆ, ವಿದ್ಯೆ ನೀಡಿ ಅರಿವು ಮೂಡಿಸಿದರೇ ಶಾಶ್ವತ ಸಹಾಯವಂತೆ ಎನ್ನುವ ರೀತಿಯಲ್ಲಿ ರಚನಾ ಶಾಲೆ ಸ್ಥಾಪಿಸಿ ಪ್ರಕಾಶ್ ಮತ್ತು ಸುನೀತಾ ಪ್ರಕಾಶ್ ಆ ಕೆಲಸವನ್ನು ಮಾಡುತ್ತಿದ್ದಾರೆ ಎಂದರು.

ರಚನಾ ಚಿತ್ತಾರ ವಾರ್ಷಿಕೋತ್ಸವದಲ್ಲಿ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ ಮಕ್ಕಳಿಗೆ ಬಹುಮಾನ ನೀಡಲಾಯಿತು.

ಆದೇ ರೀತಿ ಪೋಷಕರ ಕ್ರೀಡಾಕೂಟದಲ್ಲಿ ಭಾಗಿಯಾಗಿ ಗೆದ್ದವರಿಗೆ ಗಣ್ಯರಿಂದ ಬಹುಮಾನ ವಿತರಣೆ ಮಾಡಲಾಯಿತ್ತು. ನಂತರ ನಡೆದ ಮಕ್ಕಳ ನೃತ್ಯ, ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಪೇಕ್ಷಕರನ್ನು ಮನಸೂರೆಗೊಳಿಸಿತ್ತು. ಮಕ್ಕಳ ಮನರಂಜನೆಯ ಜೊತೆಗೆ ಗಾಯಕ ದಂಪತಿಗಳಾದ ಎಂ.ವಿ.ಕೃಷ್ಣರಾಜ್, ಪೂರ್ಣಿಮ ಕೃಷ್ಣರಾಜ್ ಚಲನಚಿತ್ರ ಗೀತೆಗಳನ್ನಾಡಿ ಪೇಕ್ಷಕರನ್ನು ರಂಜಿಸಿದರು.

ಜೆಡಿಎಸ್ ಮುಖಂಡ ಶ್ರವಣಬೆಳಗೊಳ ಶ್ರೀನಿವಾಸ್, ರಚನಾ ಪಬ್ಲಿಕ್ ಸ್ಕೂಲ್‌ನ ಸಂಸ್ಥಾಪಕ ಹೆಚ್.ಟಿ.ಪ್ರಕಾಶ್, ಸಂಸ್ಥೆಯ ಅಧ್ಯಕ್ಷ ಬಿ.ಆರ್.ಸುನೀತಾ ಪ್ರಕಾಶ್, ಆಡಳಿತಾಧಿಕಾರಿ ಎನ್.ಎನ್. ಮಂಜುನಾಥ್, ಪ್ರಾಂಶುಪಾಲೆ ಸವಿತಾ ಪ್ರಸಾದ್, ಜ್ಞಾನೇಶ್, ಮಹೇಶ್, ಶಿವರಾಜ್ ಇತರರಿದ್ದರು.

# ನಾಗಮೋಹನದಾಸ್-ಸದಾಶಿವ ಆಯೋಗದ ವರದಿ ತಿರಸ್ಕರಿಸಿ



ಆಲೂರು: ನಾಗಮೋಹನದಾಸ್ ಹಾಗೂ ಸದಾಶಿವ ಆಯೋಗದ ವರದಿಗಳನ್ನು ತಿರಸ್ಕರಿಸುವಂತೆ ಆಗ್ರಹಿಸಿ ತಾಲೂಕು ಬಲಗೈ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ಸಮಿತಿ ಅಧ್ಯಕ್ಷ ಬಸವರಾಜ್ ಮಾತನಾಡಿ, ನಾಗಮೋಹನದಾಸ್ ಹಾಗೂ ಸದಾಶಿವ ಆಯೋಗದ ವರದಿಗಳು ಸಂಪೂರ್ಣ ಅವೈಜ್ಞಾನಿಕವಾಗಿವೆ. ಹಳೆ ಮೀಸಲಾತಿ ಹಕ್ಕುಗಳ ರಕ್ಷಣೆ 2022ರ ಅಧಿನಿಯಮದಂತೆ ಸರ್ಕಾರ ಪರಿಶಿಷ್ಟ ಜಾತಿ ಮೀಸಲಾತಿಯನ್ನು ಶೇ. 17ಕ್ಕೆ ಹೆಚ್ಚಿಸಿದ್ದ ನಿರ್ಧಾರವನ್ನು ಹಿಂಪಡೆಯುವ ಯಾವುದೆ ಕ್ರಮ ಕೈಗೊಳ್ಳಬಾರದು. ರೋಸ್ಟರ್ ಬಿಂದುಗಳ ಗೊಂದಲ 2026ರ ಫೆ. 27ರ ಸರ್ಕಾರದ ಆದೇಶದಂತೆ ಬಿಂದುಗಳಿಗೆ ಮರಳಿರುವುದು ಸಮುದಾಯದ ಸಾಂವಿದಾನಿಕ ಹಕ್ಕುಗಳಿಗೆ ಧಕ್ಕೆಯಾಗಿದೆ ಎಂದರು. ಬಲಗೈ ಸಮುದಾಯದ ನೂರಾರು ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ರಾಸು ಕಳವಿಗೆ ಬಂದು ರೈತನ ಮೇಲೆ ಹಲ್ಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಕೊಟ್ಟಿಗೆಯಲ್ಲಿ ಕಟ್ಟಿದ್ದ ರಾಸುಗಳ ಕಳವಿಗೆ ಬಂದಿದ್ದ ದುಷ್ಕರ್ಮಿಗಳು ವ್ಯಕ್ತಿ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ತಾಲ್ಲೂಕಿನ ಮಾದಿಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಂಜೇಗೌಡ ಗಾಯಾಳು. ಮಾ. 8ರ ಮಧ್ಯರಾತ್ರಿ 1.30ರ ಸಮಯದಲ್ಲಿ ಕೊಟ್ಟಿಗೆ ಸಮೀಪ ಪಿಕ್‌ಅಪ್ ವಾಹನದಲ್ಲಿ ಕಳ್ಳರು ಬಂದಿದ್ದಾರೆ. ಕೊಟ್ಟಿಗೆಯಲ್ಲಿ 4 ಹಸು ಹಾಗೂ ಹೋತಗಳಿದ್ದವು. ನಾಯಿಗಳು ಜೋರಾಗಿ ಕೂಗಿದ್ದರಿಂದ ಮಂಜೇಗೌಡ ಮತ್ತಿತರು ಬಂದಾಗ ಕೊಟ್ಟಿಗೆಯಿಂದ ಇಬ್ಬರು ಓಡಿ ಬಂದಿದ್ದಾರೆ. ವಾಹನ ಹತ್ತಿ ಹೋಗಲು ಯತ್ನಿಸಿದಾಗ ಚಾಲಕನನ್ನು ತಡೆದಿದ್ದಾರೆ. ಆಗ ಮತ್ತೊಬ್ಬ ಕಬ್ಬಿಣದ ರಾಡ್‌ನಿಂದ ಮಂಜೇಗೌಡರ ತಲೆಗೆ ಹೊಡೆದು ವಾಹನ ಹತ್ತಿದ್ದಾನೆ. ಚಾಲಕ ಜೋರಾಗಿ ವಾಹನ ಓಡಿಸಿದ್ದರಿಂದ ಹಿಂದಿನ ಚಕ್ರ ಕಾಲ ಮೇಲೆ ಹರಿದಿದೆ. ಸ್ಥಳೀಯರು ವಾಹನವನ್ನು ಅಡ್ಡಗಟ್ಟಿದ್ದರಿಂದ ಅದರಲ್ಲಿದ್ದ ಐದು ಜನರು ಓಡಿ ಹೋಗಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕ್ಷುಲ್ಲಕ ಕಾರಣಕ್ಕೆ ಚಾಕುವಿನಿಂದ ಇರಿತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕ್ಷುಲ್ಲಕ ವಿಚಾರಕ್ಕೆ ಶುರುವಾದ ಯುವಕರ ಜಗಳ ವಿಕೋಪಕ್ಕೆ ತಿರುಗಿದ್ದು ಮೂವರಿಗೆ ಚಾಕುವಿನಿಂದ ಇರಿದಿರುವ ಘಟನೆ ತಾಲ್ಲೂಕಿನ ಬೀಕನಹಳ್ಳಿಯ ಪುರದಮ ದೇವಸ್ಥಾನ ಸಮೀಪ ನಡೆದಿದೆ. ದುದ್ದ ಹೋಬಳಿ ಅನುಗವಳ್ಳಿ ಗ್ರಾಮದ ಪ್ರಜ್ವಲ್ ಹಾಗೂ ಗೋವಿಂದ ಗಾಯಗೊಂಡವರು. ಹಾಸನ ಅಂಬೇಡ್ಕರ್ ನಗರದ ಅಮಿತ್ ಮತ್ತು ಆದಿತ್ಯ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಮಾ. 10 ರಂದು ಬೀಗರ ಊಟಕ್ಕೆಂದು ತೆರಳಿದಾಗ ಗಲಾಟೆ ಶುರುವಾಗಿದೆ. ಅಮಿತ್ ಮತ್ತು ಆದಿತ್ಯ ಇಬ್ಬರು ಒಟ್ಟಾಗಿ ಗೋವಿಂದನ ಕುರಿತು ಹಗುರವಾಗಿ ಮಾತನಾಡಿದ್ದಾರೆ. ಆಗ ಪ್ರಜ್ವಲ್ ಮಧ್ಯ ಪ್ರವೇಶಿಸಿದ್ದಕ್ಕೆ ಅಮಿತ್ ತನ್ನ ಕೈಯಲ್ಲಿದ್ದ ಚಾಕುವಿನಿಂದ ಹೊಟ್ಟೆಗೆ ಇರಿದಿದ್ದಾನೆ. ಆದಿತ್ಯನು ಕೈಯಿಂದ ಮುಖಕ್ಕೆ ಗುದ್ದಿದ್ದಾನೆ. ಪಕ್ಕದಲ್ಲೇ ಇದ್ದ ಗೋವಿಂದ ಹಾಗೂ ದೇವರಾಜು ಎಂಬುವವರಿಗೆ ಅಮಿತ್ ಚಾಕುವಿನಿಂದ ಬಲಗೈಗೆ ಚುಚ್ಚಿದ್ದಾನೆ ಎನ್ನಲಾಗಿದೆ. ಗಾಯಾಳುಗಳು ಹಿಮ್ಸ್‌ನಲ್ಲಿ ಚಿಕಿತ್ಸೆಗೆ ದಾಖಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಯುವ ನಿಧಿ: ಮಾ. 28ಕ್ಕೆ ಕಾಲೇಜುಗಳಲ್ಲಿ ಸಪ್ತಾಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಚನ್ನರಾಯಪಟ್ಟಣ: ಗ್ಯಾರಂಟಿ ಯೋಜನೆಯ ಭಾಗವಾಗಿರುವ ಯುವನಿಧಿ ಯೋಜನೆಗೆ ಫಲಾನುಭವಿಗಳನ್ನು ಗುರುತಿಸಿ ನೋಂದಾಯಿಸುವ ಸಲುವಾಗಿ ತಾಲೂಕು ಗ್ಯಾರಂಟಿ ಸಮಿತಿ ವತಿಯಿಂದ ಮಾ. 28ರಂದು ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನೋಂದಣಿ ಸಪ್ತಾಹ ಹಮಿಕೊಳ್ಳಲಾಗಿದೆ ಎಂದು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಲ್.ಪಿ.ಪ್ರಕಾಶ್‌ಗೌಡ ಹೇಳಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ 25ನೇ ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆಯಲ್ಲಿ ಮಾತನಾಡಿ, ರಾಜ್ಯ ಸರ್ಕಾರದ 5 ಮಹತ್ವಕಾಂಕ್ಷಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯಕ್ಕೆ ಎರಡನೇ ಸ್ಥಾನ, ಜಿಲ್ಲೆಗೆ ಮೊದಲ ಸ್ಥಾನ ಪಡೆದಿದ್ದೇವೆ. ಪದವಿ, ಡಿಪ್ಲೋಮಾ ಪಡೆದ ನಿರುದ್ಯೋಗಿಗಳಿಗೆ ಭತ್ಯೆ ಪಡೆಯುವ ಯುವನಿಧಿ ಯೋಜನೆಗಾಗಿ ಯುವಕರ ನೊಂದಯಿಸುವ ಕೆಲಸಕ್ಕೆ ಸಮಿತಿ ಮುಂದಾಗಿದ್ದು, ತಾಲ್ಲೂಕಿನ ಎಲ್ಲ ಪದವಿ ಕಾಲೇಜುಗಳಿಗೆ ಭೇಟಿ ಕೊಟ್ಟು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುವುದು. ಅದಕ್ಕಾಗಿ ಮಾ. 23 ರಂದು ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಚಾಲನೆ ನೀಡಲಾಗವುದು ಎಂದರು.

ಯುವನಿಧಿಯಡಿ ಈಗಾಗಲೇ 789 ಪದವಿ ಪಡೆದ ನಿರುದ್ಯೋಗಿಗಳು, 12 ಮಂದಿ ಡಿಪ್ಲೋಮಾ ಪಡೆದವರಿಗೆ ಸರ್ಕಾರದಿಂದ ಯೋಜನೆ ಲಾಭ ದೊರೆಯುತ್ತಿದ್ದು, ಇದನ್ನು ಮತ್ತಷ್ಟು ಹೆಚ್ಚಿಸುವ ಸಲುವಾಗಿ ಕಾಲೇಜುಗಳಲ್ಲಿ ಜಾಗೃತಿ ಸಪ್ತಾಹ ನಡೆಸಲಾಗುತ್ತಿದೆ. ಇನ್ನುಳಿದಂತೆ ತಾಲ್ಲೂಕಿನಲ್ಲಿ ಗ್ಯಾರೆಂಟಿ ಯೋಜನೆಗಳು ಅತುತ್ತಮವಾಗಿ ನಡೆಯುತ್ತಿದ್ದು, ಗೃಹಲಕ್ಷ್ಮಿ ಯೋಜನೆಯಡಿ 81,111 ಜನ ನೊಂದಣಿಯಾಗಿದ್ದು, ಇದರಲ್ಲಿ ಪ್ರಸ್ತುತ 79,716 ಮಹಿಳೆಯರಿಗೆ ಯೋಜನೆಯಿಂದ ಪ್ರತಿ ಮಾಸಿಕ 2000 ರೂ.ಹಣ ಬರುತ್ತಿದೆ. ಪ್ರತಿ ತಿಂಗಳಿಗೆ ಗೃಹಲಕ್ಷ್ಮಿ ಯೋಜನೆಗೆ 15.94 ಕೋಟಿ ರೂ. ಹಣ ಬರುತ್ತಿದ್ದು ಶೇ. 98.28 ರಷ್ಟು ಪ್ರಗತಿ ಸಾಧಿಸಲಾಗಿದೆ. ಹಣ ಪಡೆಯುವುತ್ತಿದ್ದರ ಪೈಕಿ 157ಮಂದಿ ಸಾವನ್ನಪಿದ್ದು, ಆ ಹಣವನ್ನು ಹೊಸದಾಗಿ ಗುರುತಿಸಿ ನೀಡಲಾಗುತ್ತಿದೆ. ಜಿಎಸ್‌ಟಿ ವ್ಯಾಪ್ತಿಯಡಿ ಇದ್ದ 153 ಮಂದಿಯನ್ನು ಯೋಜನೆಯಿಂದ ಹೊರಗಿಡಲಾಗಿದೆ ಎಂದರು.

ಅನ್ನಭಾಗ್ಯ ಯೋಜನೆಯಡಿ ತಾಲ್ಲೂಕಿನ 70,766 ಬಿಪಿಎಲ್ ಕಾರ್ಡ್ ಹಾಗೂ 7782 ಎಪಿಎಲ್ ಕಾರ್ಡ್ ಮತ್ತು 3818 ಎಎವೈ ಕಾರ್ಡುದಾರರಿದ್ದು ಒಟ್ಟು 82,366 ತಾಲೂಕಿನಲ್ಲಿ ಪಡಿತರ ಕಾರ್ಡ್‌ಗಳಿವೆ ಎಂದು ಮಾಹಿತಿ ನೀಡಿದರು.

ಗೃಹಜೋತಿ ಯೋಜನೆಗೆ ತಾಲೂಕಿನಲ್ಲಿ 88,103 ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದು, ಇದರಲ್ಲಿ 83,108 ಅರ್ಹ ಫಲಾನುಭವಿಗಳು ಗೃಹಜೋತಿಯಲ್ಲಿ ಉಚಿತವಾಗಿ ವಿದ್ಯುತ್ ಪಡೆಯುತ್ತಿದ್ದಾರೆ. ಶೇ.99.77ರಷ್ಟು ಪ್ರಗತಿ ಸಾಧಿಸಿ 2.73 ಕೋಟಿ ರೂ. ಹಣ ಇಲಾಖೆಗೆ ಸಂದಾಯವಾಗಿದೆದೆ. ಇದರ ಜೊತೆಗೆ ಶಕ್ತಿ ಯೋಜನೆಯ ಮೂಲಕ ತಾಲೂಕಿನಲ್ಲಿ ಪ್ರತಿ ತಿಂಗಳು ಸರಾಸರಿ 8,21,569 ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡಿದ್ದು, ಸರ್ಕಾರದಿಂದ 2.99 ಕೋಟಿ ರೂ. ಅನುದಾನ ಬಂದಿದೆ. ಮಹಿಳಾ ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಪೊಲೀಸ್ ಚೌಕಿ ಸ್ಥಾಪನೆ ಸೇರಿ ಅಗತ್ಯ ಸೌಲಭ್ಯ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಗಿರೀಶ್ ಮತ್ತಿತರರಿದ್ದರು.

# ಮಹಿಳಾ ದಿನಾಚರಣೆ ನಾಳೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಬದುಕು ಫೌಂಡೇಶನ್ ವತಿಯಿಂದ ಪಟ್ಟಣದಲ್ಲಿ ಮಾ.14 ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಮಿಕೊಳ್ಳಲಾಗಿದೆ ಎಂದು ಫೌಂಡೇಶನ್ ತಾಲ್ಲೂಕು ಮುಖ್ಯಸ್ಥೆ ಛಾಯಕೃಷ್ಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಶನಿವಾರ ಬೆಳಿಗ್ಗೆ 10 ರಿಂದ ಫೌಂಡೇಶನ್ ಸದಸ್ಯರಿಗೆ ವಿವಿಧ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಉದ್ಘಾಟಿಸಲಿದ್ದಾರೆ. ಸಂಪನೂಲ ವ್ಯಕ್ತಿಯಾಗಿ ಡಾ. ಭಾರತಿ ರವೀಂದ್ರನಾಥ್ ಹಾಗೂ ಹಿರೀಸಾವೆ ಪೊಲೀಸ್ ಠಾಣೆಯ ಎಸ್‌ಐ ರೂಪಾದೇವಿ ಬಿರಾದಾರ್ ಭಾಗವಹಿಸಲಿದ್ದಾರೆ ಎಂದರು. ಬದುಕು ಫೌಂಡೇಶನ್ ಮಹಿಳೆಯರ ಕನಸಿನ ವೇದಿಕೆಯಾಗಿದೆ. ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ದುಡಿಯುತ್ತಿರುವುದು ಸಹಜವಾದರೂ ಮನೆಯಲ್ಲಿಯೇ ಕುಟುಂಬದ ನಿರ್ವಹಣೆಯೊಂದಿಗೆ ಮಹಿಳೆಯರು ದುಡಿದು ಆರ್ಥಿಕವಾಗಿ ಸಬಲರಾಗಬೇಕು ಎಂಬುದು ನಮ ಉದ್ದೇಶವೆಂದರು. ಫೌಂಡೇಶನ್‌ನ ಶೋಭಾ ಮಾತನಾಡಿ, ಈಗಾಗಲೇ ಬದುಕು ಫೌಂಡೇಶನ್ ತಾಲ್ಲೂಕಿಗೆ ಹೆಜ್ಜೆ ಇರಿಸಿದ್ದು ಈಗಷ್ಟೇ ನೆಲೆ ಕಾಣುತ್ತಿದೆ. ಮಹಿಳೆಯರು ತಮ ಸಾಮರ್ಥ್ಯವನ್ನು ದುಡಿಮೆಯ ಮೂಲಕ ಸಾಬೀತುಪಡಿಸಿಕೊಳ್ಳಲು ಒಂದು ವೇದಿಕೆಯಾಗಿ ಬದುಕು ಫೌಂಡೇಶನ್ ಕೆಲಸ ಮಾಡಲಿದೆ. ಮತ್ತಷ್ಟು ವಿಶೇಷ ಯೋಜನೆಗಳೊಂದಿಗೆ ತಾಲ್ಲೂಕಿನಾದ್ಯಂತ ವಿಸ್ತರಿಸುವ ಯೋಜನೆ ಹೊಂದಿದ್ದೇವೆ ಎಂದರು.

# ಇತಿಹಾಸದಲ್ಲಿ ಈ ದಿನ

## ಮಾರ್ಚ್-13

1881: ರಷ್ಯಾ ಚಕ್ರವರ್ತಿ 2ನೇ ಅಲೆಕ್ಸಾಂಡರ್ ಅವರನ್ನು ಕ್ರಾಂತಿಕಾರರು ಹತ್ಯೆ ಮಾಡಿದರು.

1930: ಭಾರತದ ಸ್ವಾತಂತ್ರ್ಯ ಹೋರಾಟದ ವೇಳೆ ಮಹಾತ ಗಾಂಧಿ ಅವರು ಉಪ್ಪು ಸತ್ಯಾಗ್ರಹದ ಭಾಗವಾಗಿ ದಂಡಿ ಕಡೆಗೆ ಪಾದಯಾತ್ರೆಯನ್ನು ಮುಂದುವರೆಸಿದರು.

1940: ಲಂಡನ್‌ನಲ್ಲಿ ನಡೆದ ಸಭೆಯಲ್ಲಿ ಉಧಮ್ ಸಿಂಗ್ ಅವರು ಮೈಕಲ್ ಓಡ್ವೆರ್ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಿದರು.

### ಜನನ

1931: ವಿಲಿಯಂ ಎಚ್. ಮೆಸ್ಸಿ, ಅಮೆರಿಕದ ನಟ

1950: ವಿಲಿಯಂ ಹರ್ಟ್, ಆಸ್ಕರ್ ಪ್ರಶಸ್ತಿ ವಿಜೇತ ನಟ

### ಮರಣ

2016: ಹಿಲರಿ ಪುಟ್ನಮ್, ಪ್ರಸಿದ್ಧ ತತ್ತ್ವಜ್ಞಾನಿ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248